


# ದಕ್ಷಿಣ ಕೊರಿಯಾ

## ಶಾಂತ ನೆಲದ ಅಸಂಖ್ಯ ಚಹರೆಗಳು

■ ಡಾ. ಪ್ರೇಮಲತ ಬಿ.




ಮಾನಸಿಕವಾಗಿ, ಭೌಗೋಳಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಂಪೂರ್ಣವಾಗಿ ಪಲ್ಲಟಗೊಳಿಸಬಲ್ಲ ಪ್ರವಾಸಗಳೆಂದರೆ ನನಗೆ ಅಚ್ಚುಮೆಚ್ಚು. ಕೆಲವೊಂದು ದೇಶಗಳ ಪ್ರಯಾಣಗಳು ಈ ಎಲ್ಲವನ್ನೂ ಒಟ್ಟಿಗೆ ನೀಡುವಲ್ಲಿ ವಿಫಲವಾಗುತ್ತವೆ. ಪಶ್ಚಿಮ ದೇಶದಲ್ಲಿ ವಾಸವಾಗಿರುವ ನನಗೆ ದೂರದ ಪೌರಾತ್ಯ ದೇಶವಾದ ದಕ್ಷಿಣ ಕೊರಿಯಾಗೆ ಹೋಗಿ ಬರುವ ಅವಕಾಶ ದೊರೆತಾಗ ಬಹಳ ಖುಷಿಯಿಂದಲೇ ಹೊರಟೆ.

ಒಂದು ದೇಶ ಉತ್ತರ ದಕ್ಷಿಣವಾಗಿ ಇಬ್ಭಾಗವಾಗಿರುವುದರ ಜೊತೆಗೆ ರಾಜಕೀಯವಾಗಿ ಇನ್ನಿಲ್ಲದಂತೆ ಭಿನ್ನ ಆಡಳಿತವನ್ನು ಮತ್ತು ನಿಲುವನ್ನು ಹೊಂದಿರುವುದರ ಕಾರಣ ಉತ್ತರ ಮತ್ತು ದಕ್ಷಿಣ ಕೊರಿಯಾ ದೇಶಗಳು ಒಂದೇ ಮನೆಯ ವಿಲನ್ ಮತ್ತು ಹೀರೊಗಳ ರೀತಿಯಲ್ಲಿ ಸುದ್ದಿವಾಹಿನಿಗಳಿಗೆ ಗ್ರಾಸವಾಗುತ್ತಲೇ ಇರುತ್ತವೆ. ಉತ್ತರ ಕೊರಿಯಾಕ್ಕೆ ಪ್ರವಾಸಿಗರು ಕಾಲಿಡಲು ಸಾಧ್ಯವಾಗದಂತಹ ಉದ್ವಿಗ್ನ ಪರಿಸ್ಥಿತಿ ಇದ್ದರೆ, ಶಾಂತ ದಕ್ಷಿಣ ಕೊರಿಯಾ ಪ್ರಪಂಚದ ಎಲ್ಲ ದೇಶಗಳನ್ನು ತನ್ನ ಗ್ರಾಹಕರನ್ನಾಗಿಸಿಕೊಂಡಿದೆ.

ಪ್ರವಾಸಿಗರ ಕಾಂಪಾಸ್ಸಿನ ಮುಳ್ಳು ದಕ್ಷಿಣ ಕೊರಿಯಾದ ದಿಕ್ಕಿಗೆ ತಿರುಗುವುದು ಕಡಿಮೆಯೇ ಇರಬಹುದು. ಆದರೆ, ದಕ್ಷಿಣ ಕೊರಿಯಾದ ಉತ್ಪನ್ನಗಳು ವಿಶ್ವದ ಎಲ್ಲ ದಿಕ್ಕುಗಳಲ್ಲಿ ಬೇಡಿಕೆಯಲ್ಲಿವೆ. ಭಾರತದಲ್ಲಿ ಕೂಡ ದಕ್ಷಿಣ ಕೊರಿಯಾದ ಉತ್ಪನ್ನಗಳದ್ದೇ ಕಾರುಬಾರು ಎಂದರೆ ತಪ್ಪಿಲ್ಲ.

ನಮ್ಮ ದೇಶದಲ್ಲಿ ಮನೆ ಮನೆ ಮಾತಾಗಿರುವ ಸ್ಯಾಮ್ಸಂಗ್ ಫೋನು, ಫ್ರಿಜ್, ವಾಷಿಂಗ್ ಮೆಷೀನು ಮತ್ತಿತರ ಎಲ್ಲ ಸ್ಯಾಮ್ಸಂಗ್ ಎಲೆಕ್ಟ್ರಾನಿಕ್

ಅಜುಮ– ಕಡಲಿನಿಂದ ಹಿಂತಿರುಗದ ಗಂಡನಿಗಾಗಿ ಕಾದು ಕುಳಿತ ಮಹಿಳೆ